

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ದೇವರು ಕರುಣಾಮೂರ್ತಿಯೇ, ಕ್ರೂರಿಯೇ?

ಹಳ್ಳಿಯಿಂದ ಬಂದು ಚಿತ್ರದುರ್ಗದಲ್ಲಿ ನೆಲೆಸಿದ ಒಬ್ಬ ಯುವ ವಾಣಿಜ್ಯೋದ್ಯಮಿ ಹಾಗೂ ಪ್ರಗತಿಪರ ರೈತ. ಆತನದು ಒಂದು ಪುಟ್ಟ ಸಂಸಾರ. ಪ್ರೀತಿಯ ಮಡದಿ. ಸುಖ ಸಂಸಾರದ ಬಳ್ಳಿಯಲ್ಲಿ ಅರಳಿದ ಹೂಗಳಂತಿದ್ದ ಕನಸುಗಂಗಳ ಪುಟಾಣಿ ಅವಳಿ ಮಕ್ಕಳು. ಬೆಚ್ಚನೆಯ ಮನೆ, ವೆಚ್ಚಕ್ಕೆ ಹೊನ್ನು ಎಲ್ಲವೂ ಯಥೇಚ್ಛವಾಗಿಯೇ ಇದ್ದವು. ಎಲ್ಲಕ್ಕೂ ಮಿಗಿಲಾಗಿ ಪರಸ್ಪರರ ಇಚ್ಛೆಯನ್ನು ಅರಿತು ನಡೆಯುವ ಸತಿಪತಿಗಳು ಅವರಾಗಿದ್ದರು. ಬಾಳಿನ ಕಡಲಿನಲ್ಲಿ ಸುಖಸಂತೋಷಗಳ ಹಾಯಿ ದೋಣಿಯಲ್ಲಿ ಸಾಗುತ್ತಿದ್ದ ಸಂಸಾರ. ಸರ್ವಜ್ಞ ಬಣ್ಣಿಸುವಂತೆ 'ಸ್ವರ್ಗಕ್ಕೆ ಕಿಚ್ಚು ಹಚ್ಚ'ಬೇಕೆನಿಸುವ ಸಾಮರಸ್ಯದ ಬದುಕು ಅವರದಾಗಿತ್ತು. ಮಕ್ಕಳಿಗೆ ಬೇಸಗೆಯ ರಜೆಯಾದ್ದರಿಂದ ಮಡದಿಯು ತನ್ನಿಬ್ಬರು ಮಕ್ಕಳೊಂದಿಗೆ ತವರೂರಾದ ಕೊಟ್ಟೂರಿಗೆ ಹೋಗಿದ್ದಳು. ರಜೆ ಮುಗಿದು ಶಾಲೆಗಳು ಪುನರಾರಂಭಗೊಳ್ಳುತ್ತಿದ್ದರಿಂದ ಜೂನ್ 1 ರಂದು ಮಡದಿ ಮಕ್ಕಳನ್ನು ಕರೆತರಲು ಪತಿ ಸ್ವತಃ ಕೊಟ್ಟೂರಿಗೆ ಹೋದ. ಅತ್ತೆಮಾವಂದಿರ ಆದರಾತಿಥ್ಯವನ್ನು ಪಡೆದು ಉಭಯಕುಶಲೋಪರಿ ನಡೆಸಿ ಅವರಿಂದ ಬೀಳ್ಕೊಂಡು ತನ್ನ ಮಡದಿ ಮಕ್ಕಳನ್ನು ಮಾರುತಿ ಆಮ್ನಿಯಲ್ಲಿ ಕೂರಿಸಿಕೊಂಡು ತಾನೇ ವಾಹನ ನಡೆಸುತ್ತ ರಾಷ್ಟ್ರೀಯ ಹೆದ್ದಾರಿಯಲ್ಲಿ ಚಿತ್ರದುರ್ಗದತ್ತ ದಾರಿ ಹಿಡಿದ. ಸಂಜೆ 5 ಗಂಟೆ. ಇನ್ನು 8 ಕಿಲೋಮೀಟರ್ ಸಾಗಿದರೆ ಚಿತ್ರದುರ್ಗ. ಅಷ್ಟರಲ್ಲಿ ನಡೆಯಬಾರದ ಘಟನೆ ಮಿಂಚಿನಂತೆ ನಡೆದೇ ಹೋಯಿತು. ದಾರಿಯಲ್ಲಿ ಮುಂದೆ ಇದ್ದ ಬಸ್ಸನ್ನು ಹಿಂದಕ್ಕೆ ಹಾಕಿ ಮುಂದೆ ಸಾಗುವ ಭರದಲ್ಲಿ ಎದುರಿಗೆ ಬರುತ್ತಿದ್ದ ಲಾರಿಗೆ ಮಾರುತಿ ಆಮ್ನಿ ಮುಖಾಮುಖಿಯಾಗಿ ಡಿಕ್ಕಿ ಹೊಡೆಯಿತು. ಗಂಡ, ಹೆಂಡತಿ, ಒಬ್ಬ ಮಗ ಸ್ಥಳದಲ್ಲೇ ಅಸು ನೀಗಿದರೆ ಅರೆ ಜೀವವಾಗಿದ್ದ ಇನ್ನೊಬ್ಬ ಮಗ ಆಸ್ಪತ್ರೆಗೆ ಸಾಗಿಸುವಾಗ ದಾರಿಯಲ್ಲೇ ಕೊನೆಯುಸಿರೆಳೆದ. ಒಂದೇ ದಿನ ಹುಟ್ಟಿದ ಅವಳಿ ಮಕ್ಕಳು ಒಂದೇ ದಿನವೇ ಅಸುನೀಗಿದರು. ವಾಹನಾಪಘಾತದ ವಿಷಯವನ್ನು ತಿಳಿದ ಪಿಯುಸಿ ಓದುತ್ತಿದ್ದ ಅಳಿಯ ಸ್ಥಳಕ್ಕೆ ಧಾವಿಸಿ ಬಂದ. ಅವನು ತನ್ನ ಅತ್ತೆಯ ಬಂಗಾರದ ಒಡವೆಗಳು ದಾರಿಹೋಕರ ಪಾಲಾಗದಂತೆ ರಕ್ಷಿಸಲು ಸಾಧ್ಯವಾಯಿತೇ ಹೊರತು ಅತ್ತೆಯ ಬಂಗಾರದಂತಹ ಬಾಳು ಮಣ್ಣುಪಾಲಾಗುವುದನ್ನು ತಪ್ಪಿಸಲು ಸಾಧ್ಯವಾಗಲಿಲ್ಲ! ಕ್ಷಣಾರ್ಧದಲ್ಲಿ ಸುಖೀ ಸಂಸಾರವೊಂದರ ಭವಿಷ್ಯದ ಕನಸುಗಳು ನಜ್ಜುಗುಜ್ಜಾಗಿ ಹೋದವು! ಆ ಯುವ ದಂಪತಿಗಳ ತಂದೆ ತಾಯಂದಿರು ತಮ್ಮ ಕಣ್ಮುಂದೆ ಹುಟ್ಟಿದ ಮಕ್ಕಳು ಮತ್ತು ಮೊಮ್ಮಕ್ಕಳ ಶವಸಂಸ್ಕಾರವನ್ನು ತಾವೇ ಮುಂದೆ ನಿಂತು ಮಾಡಬೇಕಾಯಿತು. ಕಣ್ಣೀರಿನಲ್ಲಿ ಕೈತೊಳೆಯುತ್ತಾ ಶಿವಗಣಾರಾಧನೆಯನ್ನು ನಮ್ಮ ಸಮ್ಮುಖದಲ್ಲಿ ನೆರವೇರಿಸಿದರು. ಎಂತಹ ಕಲ್ಲು ಹೃದಯದವರ ಮನಸ್ಸನ್ನೂ ಕರಗಿಸಿ ನೀರಾಗಿಸುವ ಹೃದಯವಿದ್ರಾವಕ ಘಟನೆಯಿದು.

ಇಂತಹ ದುರಂತಗಳು ದಿನನಿತ್ಯ ನಮ್ಮ ಸುತ್ತ ಮುತ್ತ ಘಟಿಸುತ್ತಲೇ ಇರುತ್ತವೆ. ಇತ್ತೀಚೆಗೆ ಕೇದಾರನಾಥ ಕ್ಷೇತ್ರಕ್ಕೆ ಹೋದ ಶ್ರದ್ಧಾಳು ಭಕ್ತರ ಪಾಡು ಏನಾಯಿತು? ಉತ್ತರಾಖಂಡ್‌ನಲ್ಲಿ ಜಲಪ್ರಳಯದಿಂದ ಗಂಗಾ ಮತ್ತು ಅದರ ಉಪನದಿಗಳು ಮೇರೆ ಮೀರಿ ಹರಿದು, ಬೆಟ್ಟ ಬೆಟ್ಟಗಳೇ ಕುಸಿದು ಸಾವಿರಾರು ಯಾತ್ರಿಕರು ಪ್ರಾಣ ತೆತ್ತರು. ಕೇದಾರನಾಥ ಮಂದಿರದ ತುಂಬೆಲ್ಲ ಹೆಣಗಳು ತೇಲಾಡಿದವು. ದೂರದರ್ಶನದ ಚಾನೆಲ್‌ಗಳಲ್ಲಿ ಈ ದೃಶ್ಯಗಳನ್ನು ನೋಡಿದವರ ಎದೆ ಝಲ್ ಎಂದಿತು. ವಿಪತ್ತಿನಲ್ಲಿ ಸಿಲುಕಿಕೊಂಡವರನ್ನು ಹೇಗಾದರೂ ಮಾಡಿ ರಕ್ಷಿಸಲೇಬೇಕೆಂಬ ಭಾರತೀಯ ಸೇನಾಪಡೆಯ ಯೋಧರೂ ಸಹ ಪ್ರತಿಕೂಲ ಹವಾಮಾನದಿಂದ ಉಂಟಾದ ಪ್ರಕೃತಿಯ ವಿಕೋಪದೆದುರು ಕೈಚೆಲ್ಲಿ ಕುಳಿತುಕೊಳ್ಳಬೇಕಾದ ಅಸಹಾಯಕ ಸ್ಥಿತಿ. ರಕ್ಷಣಾಕಾರ್ಯದಲ್ಲಿ ನಿರತವಾಗಿದ್ದ ಕಾಪ್ಟರ್ ಸಹ ದುರಂತಕ್ಕೆ ಒಳಗಾಗಿ ಸಾವುನೋವು ಸಂಭವಿಸಿವೆ. ಮಂಗಳಕರನಾದ ಕೇದಾರನಾಥನ ದರ್ಶನ ಪಡೆಯಲು ಹಂಬಲಿಸಿ ಹೋದ ಭಕ್ತರಿಗೆ ಶಿವನು ಹೀಗೆ ಮಾರಣ ಮೃದಂಗವನ್ನು ಬಾರಿಸಿ ತನ್ನ ರುದ್ರಾಟ್ಟಹಾಸವನ್ನು ಮೆರೆದದ್ದು ಸರಿಯೇ?

- 2 -

ಇಂಥ ದುರ್ಘಟನೆಗಳು ನಡೆದಾಗ ಕೇಳಿ ಬರುವ ಮಾತೆಂದರೆ 'ಹಣೆಬರಹ', 'ಪ್ರಾರಬ್ಧ ಕರ್ಮ'. ಪಡೆದುಕೊಂಡು ಬಂದದ್ದನ್ನು ಅನುಭವಿಸದೆ ಇರಲು ಸಾಧ್ಯವಿಲ್ಲ ಎಂಬ ನಿಲುವು. ಜನಸಾಮಾನ್ಯರಿಗೆ ಸಂಸ್ಕೃತ ದರ್ಶನ ಶಾಸ್ತ್ರಗಳ ಪರಿಚಯ ಇಲ್ಲದಿದ್ದರೂ 'ಅವಶ್ಯಂ ಅನುಭೋಕ್ತವ್ಯಂ ಕೃತಂ ಕರ್ಮಂ ಶುಭಾಶುಭಂ' ಎಂಬ ಭಾರತೀಯ ದಾರ್ಶನಿಕರ ಚಿಂತನೆ ನಮ್ಮ ಜನರ ಮೇಲೆ ಪುರಾತನ ಕಾಲದಿಂದಲೂ ಪ್ರಭಾವ ಬೀರಿದೆ. 'ಏನು ಮಾಡೊದು ನನ್ನ ಪಾರಬ್ಧ' ಎಂಬ ಉದ್ಗಾರದ ಹಿಂದೆ ಇರುವುದು ಅಂತಹ ಪ್ರಭಾವ! 'ಏನಿದು ಪ್ರಾರಬ್ಧ?' ಎಂದು ಕೇಳಿದರೆ ತಟ್ಟನೆ ಬರುವ ಉತ್ತರ: 'ಹಿಂದಿನ ಜನ್ಮದಲ್ಲಿ ಏನೋ ತಪ್ಪು ಮಾಡಿರಬೇಕು, ಆ ತಪ್ಪಿಗೆ ಈ ಶಿಕ್ಷೆ ಅನುಭವಿಸಬೇಕಾಗಿ ಬಂದಿದೆ'. ಭಾರತೀಯ ದಾರ್ಶನಿಕರ ಪ್ರಕಾರ ಜೀವಾತ್ಮ ನಿತ್ಯ ನಿರತಿಶಯವಾದ ಆನಂದಾನುಭೂತಿಯ ಸ್ಥಿತಿಯೆನಿಸಿದ ಮುಕ್ತಿಯನ್ನು ಪಡೆಯುವವರೆಗೆ ನಿರಂತರವಾಗಿ ಸಾವು-ನೋವುಗಳ ಸುಳಿಯಲ್ಲಿ ಸಿಲುಕಿಕೊಂಡು ಭವ-ಭವಾಂತರಗಳನ್ನು ಪಡೆದು ದುಃಖದುಮ್ಮಾನಗಳನ್ನು ಅನುಭವಿಸುವುದೇ ಸಂಸಾರ. ಹೀಗೆ ಜೀವಾತ್ಮವು ಭವ-ಭವಾಂತರಗಳನ್ನು, ದುಃಖದುಮ್ಮಾನಗಳನ್ನು ಪಡೆಯುವಂತೆ ಮಾಡುವುದೇ 'ಕರ್ಮ'. ಇದು ಹೊರಗಿನ ಶಕ್ತಿಯಲ್ಲ. ಸುಖ-ದುಃಖಗಳು ಉಂಟಾಗುವುದು ಜೀವಾತ್ಮ ತನ್ನ ಕ್ರಿಯೆಗಳಿಂದ ತಾನೇ ರೂಪಿಸಿಕೊಂಡ ಪ್ರತಿಫಲ. 'ಮಾಡಿದ್ದುಣ್ಣೋ ಮಾರಾಯ' ಎಂಬ ಗಾದೆ ಮಾತಿನಲ್ಲಿ ಇದರ ಆಶಯವನ್ನು ಮನಗಾಣಬಹುದು. ಈ 'ಕರ್ಮಸಿದ್ಧಾಂತ'ದಲ್ಲಿ ಮೂರು ತೆರನಾದ ಕರ್ಮಗಳಿವೆ: 1) ಸಂಚಿತಕರ್ಮ, 2) ಪ್ರಾರಬ್ಧಕರ್ಮ ಮತ್ತು 3) ಆಗಾಮಿ ಕರ್ಮ. 'ಸಂಚಿತಕರ್ಮ'ವೆಂದರೆ ಜೀವಿಯು ಜನ್ಮ-ಜನ್ಮಾಂತರಗಳಲ್ಲಿ ಮಾಡಿದ ಕ್ರಿಯೆಗಳಿಂದ ಸಂಚಿತಗೊಂಡ ಕರ್ಮಸಮುಚ್ಚಯ. ಅಂತಹ ಕರ್ಮಸಮುಚ್ಚಯದಲ್ಲಿ ಫಲವನ್ನು ನೀಡಲು ಆರಂಭಗೊಂಡ ಕರ್ಮವೇ 'ಪ್ರಾರಬ್ಧಕರ್ಮ'. ಜೀವಂತ ವ್ಯಕ್ತಿಯ ಶರೀರ ಮತ್ತು ಅದರ ಭೋಗೋಪಭೋಗಗಳು ಅಂತಹ ಪ್ರಾರಬ್ಧಕರ್ಮದ ಪಲ. ಇನ್ನು ಈ ಜೀವನದಲ್ಲಿ ಮಾಡುವ ಒಳ್ಳೆಯ ಅಥವಾ ಕೆಟ್ಟ ನಡವಳಿಕೆಗಳಿಂದ ಸಂಚಿತಕರ್ಮಕ್ಕೆ ಹೊಸದಾಗಿ ಸೇರ್ಪಡೆಯಾಗುವ ಕರ್ಮಗಳೇ 'ಆಗಾಮಿಕರ್ಮ'. ಕರ್ಮಸಿದ್ಧಾಂತದ ಪ್ರಕಾರ ಜೀವಿಯು ಆಧ್ಯಾತ್ಮಿಕಸಾಧನೆಯಿಂದ ಈ ಮೂರು ಕರ್ಮಗಳಲ್ಲಿ 'ಸಂಚಿತಕರ್ಮ' ಮತ್ತು 'ಆಗಾಮಿಕರ್ಮ'ಗಳನ್ನು ನಿವಾರಣೆ ಮಾಡಿಕೊಳ್ಳಬಹುದು. ಆದರೆ ಫಲನೀಡಲು ಆರಂಭಗೊಂಡ 'ಪ್ರಾರಬ್ಧಕರ್ಮ'ವನ್ನು ಮಾತ್ರ ಎಂತಹ ಯೋಗಿಯಾದರೂ ಅನುಭವಿಸಿಯೇ ತೀರಬೇಕು ಬೇರೆ ಗತ್ಯಂತರವಿಲ್ಲ.

ಪುಣ್ಯ ಪಾಪಗಳ ಸಂಚಯವೇ ಕರ್ಮ. ಒಂದು ಒಳ್ಳೆಯ ಕೆಲಸ ಮಾಡಿದರೆ ಪುಣ್ಯ ಸಿಗುತ್ತದೆ. ಕೆಟ್ಟ ಕೆಲಸ ಮಾಡಿದರೆ ಪಾಪ ಬರುತ್ತದೆ ಎಂಬ ನಂಬಿಕೆ ಭಾರತೀಯರದು. "ನಮ್ಮ ಕೂಡಲ-ಸಂಗಮ-ದೇವರು ಬರೆದ ಬರೆಹವ ತಪ್ಪಿಸುವಡೆ ಹರಿಬ್ರಹ್ಮಾದಿಗಳಿಗಳವಲ್ಲ!" ಎನ್ನುತ್ತಾರೆ ಬಸವಣ್ಣನವರು. ಹಣೆಬರೆಹ, ಅದೃಷ್ಟ ಎಂದರೆ ಕಣ್ಣಿಗೆ ಕಾಣದುದು ಎಂಬುದು ಶಾಬ್ದಿಕ ಅರ್ಥ. ಅಂದರೆ ಅದು ಮನುಷ್ಯನ ಬುದ್ಧಿಶಕ್ತಿ, ಆಲೋಚನೆ, ತರ್ಕಕ್ಕೆ ನಿಲುಕದ್ದು ಎಂದರ್ಥ. ಆದರೆ ಹಣೆಯ ಬರೆಹ, ಪ್ರಾರಬ್ಧಗಳನ್ನು ಯದ್ವಾತದ್ವಾ ಅನ್ವಯಿಸಕೂಡದು. ಆಗುವ ಅನಾಹುತವನ್ನು ತಿಳಿದೂ ತಿಳಿದೂ ಅದಕ್ಕೆ ಒಡ್ಡಿಕೊಳ್ಳುವ ಮೂರ್ಖತನವನ್ನು ಹಣೆಯಬರೆಹಕ್ಕೆ ಅಥವಾ ಪ್ರಾರಬ್ಧಕ್ಕೆ ಆರೋಪಿಸಲಾಗದು. ತಲೆಯನ್ನು ಬಂಡೆಗೆ ಅಪ್ಪಳಿಸಿಕೊಂಡು ತಲೆಯೊಡೆದುಕೊಂಡು ನನ್ನ ಪ್ರಾರಬ್ಧ, ಹಣೆಬರಹ, ದುರದೃಷ್ಟ ಎನ್ನುವವನನ್ನು ಏನೆನ್ನಬೇಕು! ಕುಡಿದು ತೂರಾಡುತ್ತಾ ಹೆದ್ದಾರಿಯಲ್ಲಿ ಅಡ್ಡಾದಿಡ್ಡಿ ಓಡಾಡುವವನು ಲಾರಿಗೆ ಸಿಕ್ಕಿ ಸತ್ತರೆ ಅವನದು ಮೂರ್ಖತನವೆನ್ನಬಹುದೇ ಹೊರತು ಹಣೆಬರಹ ಎಂದು ಹೇಳಲಾಗದು. ಬೆಂಕಿಯು ಸುಡುತ್ತದೆ ಎಂದು ಗೊತ್ತಿದ್ದೂ ಕುಲುಮೆಯಲ್ಲಿ ಕೈಯಿಟ್ಟು ಸುಟ್ಟುಕೊಳ್ಳುವವನದು ಎಂತಹ ಹಣೆಬರಹ?

ವ್ಯಕ್ತಿಯ ಜೀವನದಲ್ಲಿ ಇಂದು ಘಟಿಸುವ ಘಟನೆಗಳಿಗೆಲ್ಲಾ ಹಿಂದಿನ ಜನ್ಮದ ಕರ್ಮದ ಫಲವೇ ಕಾರಣ ಎನ್ನುವುದಾದರೆ ಒಂದು ಮುಖ್ಯವಾದ ನೈತಿಕ ಪ್ರಶ್ನೆ ಉದ್ಭವಿಸುತ್ತದೆ. ಒಬ್ಬ ಕೊಲೆಪಾತಕಿಯೂ ಸಹ ತಾನು ಮಾಡಿದ ಕೊಲೆಗೆ 'ಕರ್ಮಸಿದ್ಧಾಂತ'ವನ್ನು ಉದಾಹರಿಸಿ ತನ್ನ ತಪ್ಪನ್ನು ಸಮರ್ಥಿಸಿಕೊಳ್ಳಬಹುದಲ್ಲವೇ? ಹಾಗಲ್ಲ. ಮನುಷ್ಯನು ಮಾಡುವ ಪ್ರತಿಯೊಂದು ಕ್ರಿಯೆಯೂ ಒಂದು ಸಂಸ್ಕಾರವನ್ನು ಮೂಡಿಸುತ್ತದೆ. ಆ ಸಂಸ್ಕಾರಕ್ಕನುಗುಣವಾಗಿ ಅವನ ವರ್ತನೆ ಇರುತ್ತದೆ. ಅದು ಒಳ್ಳೆಯದಿರಬಹುದು, ಕೆಟ್ಟದಿರಬಹುದು. ಆದರೆ ವಿವೇಚನೆ ಇಲ್ಲದೆ ಕೇವಲ ಸಂಸ್ಕಾರಕ್ಕನುಗುಣವಾಗಿ ಮಾಡುವ ವರ್ತನೆ ಒಳ್ಳೆಯದಾಗಿದ್ದರೆ ಯಾವ ಕೆಡುಕೂ ಇಲ್ಲ. ಕೆಟ್ಟದಾಗಿದ್ದರೆ ಅದು ವಿವೇಚನಾರಹಿತ ನಡವಳಿಕೆಯೆನಿಸಿ ದಂಡನೆಗೆ ಅರ್ಹವಾಗುತ್ತದೆ. ಕೆಟ್ಟಸಂಸ್ಕಾರಗಳನ್ನು ಮೆಟ್ಟಿ ನಿಲ್ಲಬೇಕೆಂಬ ಮನೋದಾರ್ಢ್ಯವೇ ಮನುಷ್ಯಪ್ರಯತ್ನ ಅಥವಾ ಸಾಧನೆ. ಇದನ್ನೇ ಬಸವಣ್ಣನವರು ತಮ್ಮ ಒಂದು ವಚನದಲ್ಲಿ 'ಪುಣ್ಯಪಾಪವೆಂಬುವು ತಮ್ಮಿಷ್ಟ ಕಂಡಿರೇ' ಎಂದು ಪ್ರತಿಪಾದಿಸುತ್ತಾರೆ.

ಭಕ್ತಿಯಿಂದ ತನ್ನ ದರ್ಶನಕ್ಕೆ ಬಂದ ಭಕ್ತರಿಗೆ ಶಿವ ಇಷ್ಟೊಂದು ನಿಷ್ಕರುಣಿಯಾಗುವುದು ತರವೇ? 'ಕರುಣಾಕರ ನೀನೆಂದೆನಿಸಿಕೊಂಬೆ ಸಿರಿಯಾಳನ ಮಗನ ಬೇಡುವರೇನಯ್ಯಾ?' ಎಂದು ಬಹಳ ಹಿಂದೆಯೇ ಪ್ರಶ್ನಿಸಿದ್ದಾಳೆ ಹಿರೇಜಂಬೂರಿನ ಶಿವಶರಣೆ ಸತ್ಯಕ್ಕ. ತನ್ನ ಅನುಭಾವದಲ್ಲಿ ಈ ಪ್ರಶ್ನೆಗೆ ಆಕೆ ಕಂಡುಕೊಂಡ ಉತ್ತರ:

**"ನಿಮ್ಮ ಮಹಿಮೆಯ ನೀವೇ ಬಲ್ಲಿರಿ, ಎನ್ನನುದ್ಧರಿಸಯ್ಯಾ ಶಂಭುಜಕ್ಕೇಶ್ವರಾ!"**

**27.6.2013**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑